ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಹಾಗೂ ಸಾರಿಗೆ ಸಚಿವರು) :

ಅ. ಕೊಳಚೆ ಕಾಲುವೆ ಉಪ-ವಿಭಾಗ ಕೊಣ್ಣೂರ ಕಚೇರಿಯು 1973 ರಿಂದ 1975ರ ವರೆಗೆ ಮಲಪ್ರಭಾ ಎಡದಂಡೆ ಕಾಲುವೆ ನಿರ್ಮಾಣ ವಿಭಾಗ, ರಾಮದುರ್ಗ ಕಚೇರಿಯ ಆಡಳಿತ ವ್ಯಾಪ್ತಿಗೆ ಒಳಪಟ್ಟಿತ್ತು. ತದನಂತರ ವಿಭಾಗಗಳ ಮರು ಹೊಂದಾಣಿಕೆ ಸಮಯದಲ್ಲಿ ಮಲಪ್ರಭಾ ಬಲದಂಡೆ ಕಾಲುವೆ ನಿರ್ಮಾಣ ವಿಭಾಗ ನಂ.1, ನರಗುಂದ ಕಚೇರಿಯ ಅಧೀನಕ್ಕೆ ಒಳಪಡಿಸಲಾಗಿದ್ದು, ಉಳಿದಂತೆ ಯಾವುದೇ ಕಾಮಗಾರಿಗಳನ್ನು ಹಸ್ತಾಂತರಿಸಿರುವುದಿಲ್ಲ.

ಆ. ರಾಮದುರ್ಗ ವಿಭಾಗದಿಂದ ನರಗುಂದ ವಿಭಾಗಕ್ಕೆ ಯಾವುದೇ ನೀರಾವರಿ ಕ್ಷೇತ್ರವನ್ನು ವರ್ಗಾವಣೆ ಮಾಡಿರುವುದಿಲ್ಲ.

ನರಗುಂದ ವಿಭಾಗದಡಿಯಲ್ಲಿನ ನೀರಾವರಿ ಕ್ಷೇತ್ರ ಈ ಕೆಳಕಂಡಂತಿದೆ.

1. ನರಗುಂದ ಶಾಖಾ ಕಾಲುವೆ 46,977 ಹೆ
2. ಕೊಳಚೆ ಬಲದಂಡೆ ಕಾಲುವೆ 5,067 ಹೆ

52,044 ಹೆ

ಇ. ಮೇಲಿನ ಉತ್ತರದಂತೆ ಪ್ರಶ್ನೆಯು ಉದ್ಭವಿಸುವುದಿಲ್ಲ.

1664 (2161) ಶ್ರೀ ಯಾದವಾಡ್ ಮಹಾದೇವಪ್ಪ ಶಿವಲಿಂಗಪ್ಪ (ರಾಮದುರ್ಗ) ಮಾನ್ಯ ಜಲ ಸಂಪನ್ಮೂಲ ಹಾಗೂ ಸಾರಿಗೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ. ನರಗುಂದ ಮಲಪ್ರಭಾ ಬಲದಂಡೆ ಕಾಲುವೆ ವಿಭಾಗ ವ್ಯಾಪ್ತಿಯಲ್ಲಿ ಬರುವ ಕೊಳಚೆ ಬಲದಂಡೆ ಕಾಲುವೆಯು 1954ರಲ್ಲಿ ನಿರ್ಮಾಣಗೊಂಡು ಇಲ್ಲಿಯವರೆಗೆ ದುರಸ್ತಿಯಾಗದೇ ಕಾಲುವೆಯ ಆಕಾರವೆ ತಪ್ಪಿ ಹೋಗಿರುವುದು ನಿಜವೆ ;

ಆ. ಇದರಿಂದ ನೀರಿನ ಸೋರುವಿಕೆಯಾಗಿ ಕಾಲುವೆಯಲ್ಲಿ ಬೆಳೆದ ಗಿಡಗಂಟೆಗಳಿಂದ ಕಾಲುವೆಯಲ್ಲಿ ನೀರು ನಿಂತು ರೈತರ ಜಮೀನಿಗೆ ಹರಿಯುತ್ತಿರುವ ಪ್ರಯುಕ್ತ ಸವಳು-ಜವುಳು ಉಂಟಾಗಿ ರೈತರ ಜಮೀನು ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ. ರಾಮದುರ್ಗ ತಾಲ್ಲೂಕಿನ 49 ಕಿ.ಮೀ ಉದ್ದದ ಕೊಳಚಿ ಬಲದಂಡೆ ಕಾಲುವೆಯ ಪೈಕಿ ಈಗ ಕೇವಲ 05 ಕಿ.ಮೀ. ಕಾಲುವೆಯನ್ನು ಮರು ಸುಧಾರಣೆ ಕೈಗೊಳ್ಳಲು ಯೋಜಿಸಲಾಗಿದೆಯೇ;

ಈ. ಹಾಗಿದ್ದಲ್ಲಿ, ಇನ್ನುಳಿದ ಉದ್ದವನ್ನು ಯಾವಾಗ ಸುಧಾರಣೆಗೆ ಕ್ರಮ ಕೈಗೊಳ್ಳಲಾಗುವುದು;

ಉ. ಈ ಕಾಲುವೆಯು ಸಂಪೂರ್ಣವಾಗಿ ಹಾಳಾಗಿದ್ದು ಅವುಗಳಿಂದ ಯಾವ ಪ್ರಯೋಜನವೂ ರೈತರಿಗೆ ಆಗುತ್ತಿಲ್ಲದಿರುವುದರಿಂದ ಹಂಚುಕಾಲುವೆಗಳ ದುರಸ್ತಿಯನ್ನು ಯಾವಾಗ ಕೈಗೊಳ್ಳಲಾಗುವುದು (ವಿವರ ನೀಡುವುದು)?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಹಾಗೂ ಸಾರಿಗೆ ಸಚಿವರು) :

ಅ. ಕೊಳಚೆ ಬಲದಂಡೆ ಕಾಲುವೆಯು 1954-55 ರಲ್ಲಿ ನಿರ್ಮಾಣಗೊಂಡಿದ್ದು, ಪ್ರತಿ ವರ್ಷ ಅಗತ್ಯವಿರುವ ದುರಸ್ಥಿ ಕಾಮಗಾರಿಯನ್ನು ಮಾಡುತ್ತ ಬರಲಾಗಿದೆ. ಕಿ.ಮೀ.0 ನಿಂದ ಕಿ.ಮೀ.5ರ ವರೆಗೆ ಕೆಲವೊಂದು ಕಡೆ ಕಾಲುವೆಯ ಸಮಮಟ್ಟ ಇಲ್ಲವೆಂದು ಇಲ್ಲಿ ಕಾಂಕ್ರೀಟ ಲೈನಿಂಗ್ ಮಾಡಲು ಮುಖ್ಯ ಇಂಜಿನಿಯರ್, ನೀರಾವರಿ (ಉ) ವಲಯ, ಬೆಳಗಾಂ ಇವರು ಪ್ರಸ್ತಾವನೆಯನ್ನು ದಿನಾಂಕ : 07.12.04 ರಂದು ನಡೆದ 55ನೇ ಕರ್ನಾಟಕ ನೀರಾವರಿ ನಿಗಮದ ತಾಂತ್ರಿಕ ಉಪ ಸಮಿತಿಯ ಮುಂದೆ ಮಂಡಿಸಲಾಗಿತ್ತು. ಚರ್ಚೆಯ ನಂತರ ಉಪ ಸಮಿತಿಯು ಸದರಿ

ಕಿ.ಮೀಗಳನ್ನು ಪರಿವೀಕ್ಷಿಸಲು ಸೂಚಿಸಿದಂತೆ ಪ್ರೊ. ಸುಬ್ಬರಾವ್ ರವರು ದಿನಾಂಕ. 24/25.02.05 ರಂದು ಸ್ಥಳವನ್ನು ವೀಕ್ಷಿಸಿರುತ್ತಾರೆ. ಅವರಿಂದ ವರದಿಯನ್ನು ನಿರೀಕ್ಷಿಸಲಾಗಿದೆ.

ಆ. ಪ್ರತಿ ವರ್ಷ ನೀರು ಹರಿಯದ ಸಮಯದಲ್ಲಿ ಕಾಲುವೆಯಲ್ಲಿ ಬಿದ್ದ ಹೂಳು ಮತ್ತು ಕಾಲುವೆಯ ಎರಡೂ ಬದಿಯಲ್ಲಿ ಬೆಳೆದ ಗಿಡಗಂಟಿಯನ್ನು ತೆಗೆದು ಸ್ವಚ್ಛ ಮಾಡಿಕೊಂಡು ನೀರನ್ನು ಸಮರ್ಪಕವಾಗಿ ಒದಗಿಸಲಾಗುತ್ತಿದೆ. ಆದರೆ ರೈತರು ಒಮ್ಮೊಮ್ಮೆ ತಮ್ಮ ಬೆಳೆಗಳಿಗೆ ಅಗತ್ಯಕ್ಕಿಂತ ಹೆಚ್ಚು ನೀರನ್ನು ಹಾಯಿಸಿಕೊಳ್ಳುವುದರಿಂದ, ರೈತರ ಜಮೀನು ಸವಳು ಜವಳು ಆಗಿರುವುದಲ್ಲದೇ, ಕಾಲುವೆಯ ಕೆಲವೊಂದು ಕಡೆ ಅಡ್ಡಮೋರಿಯಲ್ಲಿ ಸೋರುವಿಕೆಯಿರುವುದರಿಂದ ಭೂಮಿಯು ಜವಳಾಗುವ ಪರಿಸ್ಥಿತಿ ಇರುತ್ತದೆ.

ಇ. ಕೊಳಚೆ ಬಲದಂಡೆ ಕಾಳುವೆಯು ಒಟ್ಟು 49 ಕಿ.ಮೀ. ಉದ್ದವಿದ್ದು, ಅದರಲ್ಲಿ ರಾಮದುರ್ಗ ತಾಲ್ಲೂಕಿನಲ್ಲಿ ಸುಮಾರು 16 ಕಿಮೀ ಬರುತ್ತಿದ್ದು, ಇದರಲ್ಲಿ ಮೊದಲನೇ ಹಂತವಾಗಿ ಈಗ 0 ರಿಂದ 5 ಕಿ.ಮೀ. ವರೆಗೆ ಮಾತ್ರ ಕಾಂಕ್ರೀಟ್ ಲೈನಿಂಗ್ ಪ್ರಸ್ತಾವನೆಯು ಇದ್ದು, ಪ್ರೊ. ಸುಬ್ಬರಾವ್, ಐ.ಐ.ಎಸ್.ಸಿ. ಇವರು ಸ್ಥಳ ಪರಿವೀಕ್ಷಣೆ ಮಾಡಿದ್ದು ವರದಿಯನ್ನು ನಿರೀಕ್ಷಿಸಲಾಗಿದೆ.

ಈ. ಕಿ.ಮೀ. 0 ನಿಂದ ಕಿ.ಮೀ.5 ರವರೆಗಿನ ಕಾಮಗಾರಿ ಅನುಮೋದನೆಯಾದ ನಂತರ ಉಳಿದ ಕಿ.ಮೀ.ಗಳಲ್ಲಿ ಅವಶ್ಯಕತೆ ಇದ್ದಲ್ಲಿ ಪರಿಶೀಲಿಸಲಾಗುವುದು.

ಉ. ಕೊಳಚೆ ಬಲದಂಡೆ ಕಾಲುವೆಯ ಮುಖಾಂತರ 1976–77 ರಿಂದ ಇಲ್ಲಿಯವರೆಗೆ ಕಿ.ಮೀ.0 ನಿಂದ ಕಿ.ಮೀ 49 ರವರೆಗೆ ನೀರನ್ನು ಪೂರೈಸಲಾಗಿದೆ. ಅನುದಾನದ ಲಭ್ಯತೆಯ ಮೇರೆಗೆ ಮತ್ತು ಆದ್ಯತೆಯ ಮೇಲೆ ಹಂಚು ಕಾಲುವೆಯ ದುರಸ್ಥಿಯನ್ನು ತೆಗೆದುಕೊಳ್ಳಲಾಗುವುದು.

1665(2162) ಶ್ರೀ ಯೋಗೀಶ ಭಟ್.ಎಸ್. (ಮಂಗಳೂರು) ಸನ್ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ. ಚನ್ನಪಟ್ಟಣ–ರಾಮನಗರ ಗಡಿಯಲ್ಲಿರುವ ಜಾನಪದ ಲೋಕವನ್ನು ಮುಚ್ಚಲು ಆಡಳಿತ ಮಂಡಳಿ ನಿರ್ಧರಿಸಿರುವುದು ನಿಜವೇ;

ಆ. ನಿಜವಾಗಿದ್ದಲ್ಲಿ ಕಾರಣವೇನು ;

ಇ. ರಾಜ್ಯ ಸರ್ಕಾರ ಜಾನಪದ ಲೋಕಕ್ಕೆ ನೀಡುತ್ತಿದ್ದ ಅನುದಾನದ ವಿವರಗಳೇನು ;

ಈ. ಇತ್ತೀಚಿನ ವರ್ಷಗಳಲ್ಲಿ ಅನುದಾನವನ್ನು ಕಡಿಮೆ ಮಾಡಿರುವುದು ನಿಜವೇ ;

ಉ. ಹೌದಾದಲ್ಲಿ, ಕಾರಣಗಳೇನು ?

ಊ. ಜಾನಪದ ಕಲಾವಿದರ 'ಕಾಶಿ' ಎಂದು ಪ್ರಸಿದ್ದವಾಗಿರುವ ಜಾನಪದ ಲೋಕವನ್ನು ಉಳಿಸಿ ಬೆಳೆಸಲು ಸುಕ್ತ ಪ್ರಮಾಣದ ಅನುದಾನ ಮತ್ತಿತರ ವ್ಯವಸ್ಥೆಗಳನ್ನು ಒದಗಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಧರಂಸಿಂಗ್ (ಸನ್ಮಾನ್ಯ ಮುಖ್ಯ ಮಂತ್ರಿಗಳು) :

ಅ. 1. ಹೌದು.

2. ಆದರೆ ಮುಚ್ಚದಿರುವಂತೆ ತೀರ್ಮಾನಿಸಿರುವುದಾಗಿ ಹೇಳಿಕೆ ನೀಡಿರುತ್ತಾರೆ.

ಆ. ಅನುದಾನ ಹೆಚ್ಚಿಸುವ ಬೇಡಿಕೆ ಈಡೇರಿರುವುದಿಲ್ಲ ಎಂಬ ಕಾರಣದಿಂದ ಪ್ರಾಧಿಕಾರದ ಅಧ್ಯಕ್ಷರು ಹೇಳಿಕೆ ನೀಡಿದ್ದಾರೆ.

ಇ. ಕಳೆದ ಆರು ವರ್ಷಗಳಲ್ಲಿ ನೀಡಿದ ವಿವರಗಳನ್ನು ಒದಗಿಸಲಾಗಿದೆ.